
# ಜಾಗತೀಕರಣ ಮತ್ತು ವಿಶ್ವಶಾಂತಿ

ಶೌಕತ್ ಆಲಿ



ಮೊದಲು ನಿನ್ನಲ್ಲಿ ನೀನು ಶಾಂತಿಯನ್ನು ಕಂಡುಕೋ, ಹಾಗಾದಾಗ ಮಾತ್ರ ಇತರರಲ್ಲೂ ನೀನು ಶಾಂತಿಯನ್ನು ತರಲು ಸಾಧ್ಯ

*– ಥಾಮಸ್ ಎ. ಕೆಂಪಿಸ್.*

## ಈ ಬದುಕು ಶಾಶ್ವತವೇ?

**ಸೃಷ್ಟಿ**ಕರ್ತನ ದೃಷ್ಟಿಯಲ್ಲಿ ಜಗತ್ತಿನ ನಿರ್ಮಾಣವಾದರೂ, ವೈಜ್ಞಾನಿಕವಾಗಿ ವೈಚಾರಿಕವಾಗಿ ಮಾಡಿಕೊಂಡ ಹೊಸ ಹೊಸ ಅನ್ವೇಷಣೆಗಳಿಂದ ಮನುಕುಲವು ವಿನಾಶದ ಹಾದಿ ತಲುಪುತ್ತಿರುವುದು ಕಹಿಸತ್ಯವೇ ಆಗಿದೆ. ಅಸಾಧ್ಯವಾದ ಅನೇಕ ಸಂಗತಿಗಳು ಇಂದು ಸಾಧ್ಯವಾಗಿ, ಸಮಸ್ಯೆಗಳು ಸವಾಲಾಗಿ ಹಿಂಸಾ ಪ್ರವೃತ್ತಿಯಲ್ಲಿ ಭಯದ ಕಲ್ಪನೆಯಲ್ಲಿ ತಲ್ಲಣಗೊಳ್ಳುತ್ತಿರುವ ಅನೇಕ ದೇಶಗಳು ಮಾನವನ ಕುಕೃತ್ಯಗಳಿಗೆ ಬಲಿಯಾಗುತ್ತಿವೆ. ಸಾವು ನೋವು ನರ್ತಿಸುತ್ತಿವೆ. ಸುಂದರ ಸೃಷ್ಟಿಯ ಈ ಜಗತ್ತಿನಲ್ಲಿ ಅಲ್ಲೋಲಕಲ್ಲೋಲಗಳಾಗುತ್ತಿವೆ. ಇದರಿಂದಾಗಿ, ಮಾನವೀಯ ಹಿತ ಕಾಪಾಡುವಲ್ಲಿ **ಜ್ಞಾನ, ವಿಜ್ಞಾನ, ಸುಜ್ಞಾನಗಳ** ಅಸ್ತಿತ್ವ ರೂಪಿತವಾಗಬೇಕಾಗಿದೆ.

ಮಾನವನಿಗೆ ಸೃಷ್ಟಿಕರ್ತನ ಕುರಿತು ಭಕ್ತಿಭಾವ ಇಲ್ಲದಂತಾಗಿದೆ. ನಂಬಿಕೆ ವಿಶ್ವಾಸಗಳು ಸಮಾಧಿಯಾಗಿವೆ. ಒಂದು ಮನೆಯ ಸದಸ್ಯರಲ್ಲೇ ನೂರೆಂಟು ಒಡಕು, ಬಿರುಕುಗಳು. ಸಂಸಾರ ಎಂದರೇ ಸರಿದೂರ ಎಂದುಕೊಳ್ಳುವಂತೆ, ಸದಸ್ಯರಲ್ಲಿ ಪರಸ್ಪರ ಸಂಬಂಧದ ಕೊಂಡಿ ಕಳಚಿ ಹೋಗುತ್ತಿದೆ. ದ್ವೇಷ ಅಸೂಯೆ, ಮತ್ಸರ, ಮನಸ್ತಾಪಗಳಿಂದ ಕೂಡಿದ ಸಂಬಂಧದಲ್ಲಿ ಅನುರಾಗವಿಲ್ಲ; ಮಮತೆ ವಾತ್ಸಲ್ಯಗಳ ಛಾಯೆಯೇ ಇಲ್ಲ. ಒಂದು ತಾಯಿಯ ಮಕ್ಕಳಲ್ಲಿ ಕೂಡ ಒಂದುಗೂಡಿ ಬಾಳುವ ಕನಸುಗಳಿಲ್ಲ. ಸೋದರತೆ, ಸಮಾನತೆ, ಸಮನ್ವಯತೆಗಳೆಲ್ಲವೂ ಸಾಲು ಸಾಲು ಮಲಗಿರುವ ಜೀವಂತ ಶವಗಳಾಗಿವೆ. ಸುಂದರವಾಗಿದ್ದ ಮನೆ ಇದ್ದರೆ ಸಾಲದು, ಅಲ್ಲಿ ಹಸನಾದ ಬದುಕಿರಬೇಕು. ಇಷ್ಟಕ್ಕೂ ಈ ಬದುಕು ಶಾಶ್ವತವೇ ಎಂಬುದನ್ನು ಮಾನವ ಇನ್ನುಮುಂದೆ ಕಂಡುಕೊಳ್ಳಬೇಕಾಗಿದೆ.

## ನೆಮ್ಮದಿ ಕಾಣದ ಬದುಕು

ಭಾರತೀಯ ಸಂಸ್ಕೃತಿಯು ವಿಶ್ವದ ಜನತೆಗೆ ನಾವೆಲ್ಲ ಒಂದು ಅನ್ನುವುದನ್ನು **'ವಸುಧೈವ ಕುಟುಂಬಕಂ'** ಎಂಬ ಮಾತುಗಳಲ್ಲಿ ಸಾರಿ ಸಾರಿ ಹೇಳಿದೆ. ವಿಶ್ವ ಮಾನವ ಅಭ್ಯುದಯವೆ ಇದರ ಗುರಿ. ಇದರ ಉದ್ದೇಶ ಸರ್ವರಲ್ಲೂ ಸೋದರತೆ, ಸಮಾನತೆ, ದೇಶದೇಶಗಳಲ್ಲಿ ಮೈತ್ರಿ ಬಾಂಧವ್ಯ, ವ್ಯಾಪಾರ ವಹಿವಾಟು, ರಾಜಕೀಯವಾಗಿ ಸಾಮಾಜಿಕವಾಗಿ ಆರ್ಥಿಕವಾಗಿ ಪರಸ್ಪರ ಸಹಕಾರ ನೀಡುವಂಥ ಮನೋಧರ್ಮ – ಇವುಗಳನ್ನೆಲ್ಲ ಬೆಳೆಸುತ್ತ ಈ ಜಗತ್ತಿನಲ್ಲಿ ವಿಶ್ವಬಂಧುಗಳ ಸಾಮ್ರಾಜ್ಯ ಸ್ಥಾಪಿಸುವುದೇ ಆಗಿದೆ. ಆದರೆ ಈಗ ಏನಾಗುತ್ತಿದೆ? ಮಾನವನ ಆಲೋಚನೆಗಳು ಮಾರ್ಗದರ್ಶನದ ಕೊರತೆಯಿಂದಾಗಿ ದಾರಿ ತಪ್ಪುತ್ತಿವೆ; ವಿಚಾರಧಾರೆಗಳು ಸ್ವಾರ್ಥಕ್ಕೆ ಸೀಮಿತವಾಗುತ್ತಿವೆ; ದಿಢೀರ್ ಶ್ರೀಮಂತಿಕೆ, ಐಶಾರಾಮದ ಬದುಕು; ಎಲ್ಲವೂ ತನ್ನದಾಗಬೇಕು ಎನ್ನುವ ಹಂಬಲ; ಅಡ್ಡದಾರಿಯ ಕಾರ್ಯ ಪ್ರವೃತ್ತಿಗಳು – ಇವುಗಳೆಲ್ಲದರಿಂದ ಮಾನವನು ನೆಮ್ಮದಿ ಕಾಣದ ಬದುಕು ಸಾಗಿಸುವಂತಾಗಿದೆ.

## ದಾರಿದೀಪಗಳು

ದುಡ್ಡೊಂದಿದ್ದರೆ ಸಾಲದು, ದುಡ್ಡಿನಿಂದ ನಮಗೆ ಬೇಕಾದ ಮಾನಸಿಕ ನೆಮ್ಮದಿಯನ್ನು ಕೊಂಡುಕೊಳ್ಳಲು ಸಾಧ್ಯವೇ? ಧ್ಯಾನದಲ್ಲಿ ಮೌನ ಆವರಿಸುವುದೇ? ಶಾಂತಿ ದೊರಕುವುದೇ? ಖಂಡಿತಾ ಇಲ್ಲ! ಯಾವ ದೇಶದಲ್ಲಿ ಶಾಂತಿ ಇದೆಯೋ ಅದು ಸಮೃದ್ಧಿ ಹೊಂದುತ್ತದೆ, ಅಭಿವೃದ್ಧಿಯಾಗುತ್ತದೆ. ಮಾನ್ಯತೆ ಪಡೆಯುತ್ತದೆ. ಎಲ್ಲಿ ಅಶಾಂತಿ ತಲೆದೋರಿದೆಯೋ ಅಲ್ಲಿ ಅನಾಹುತಗಳು, ಆಕಸ್ಮಿಕ ಘಟನೆಗಳು, ಅಪಾಯಕಾರಿ ಬೆಳವಣಿಗೆಗಳೇ ಅಧಿಕವಾಗುತ್ತವೆ.

ಯುದ್ಧಗಳು, ಭಯೋತ್ಪಾದನೆ, ಕೊಲೆಸುಲಿಗೆಗಳು –ಒಟ್ಟಿನಲ್ಲಿ, ಮಾನವನ ಹಿಂಸಾವೃತ್ತಿಯ ಪೈಶಾಚಿಕ ಕೃತ್ಯಗಳಿಂದ ದೇಶ ದೇಶಗಳಿಗೆ ಹಾನಿಯಾಗುತ್ತಿದೆ, ಪ್ರಕೃತಿ ಪರಿಸರ ನಾಶವಾಗುತ್ತಿದೆ. ಎಲ್ಲಾ ತರಹದ ಮಾಲಿನ್ಯಗಳೂ ದೈತ್ಯಾಕಾರ ರೂಪವನ್ನು ತಾಳುತ್ತಿವೆ. ವಿಚಿತ್ರ ರೋಗರುಜಿನಗಳಿಗೆ ಜೀವಗಳು ಬಲಿಯಾಗುತ್ತಿವೆ. ಕೆಲವಡೆಗಳಂತೂ ಶವಗಳ ಸಾಮ್ರಾಜ್ಯವಾಗುತ್ತಿವೆ. ಒಂದಲ್ಲ ಒಂದು ದಿನ ತನ್ನ ದುರುಳತನದಿಂದ ಮಾನವ ತನ್ನನ್ನು ತಾನು ಅಂತ್ಯಗೊಳಿಸಿಕೊಳ್ಳುವನು; ಅನಾಥ ಹೆಣವಾಗುವನು, ಸ್ವಾರ್ಥಿಯ ಸಮಾಧಿಯಾಗುವನು. ಇದರಿಂದಾಗಿ ದೈವದತ್ತವಾಗಿ ಬಂದ ಮಾನವಜನ್ಮ ವ್ಯರ್ಥವಾಗುವುದು. ಅದು ವ್ಯರ್ಥವಾಗಿ ಹೋಗುವ ಮುನ್ನ ಬದುಕಿಗೆ ಅರ್ಥ ಕಂಡುಕೊಳ್ಳಬೇಕಿದೆ. ಅದೇ ಸಾರ್ಥಕತೆಯ ಮಾರ್ಗ; ಅದುವೇ ಸುಮಾರ್ಗ. ಪ್ರವಾದಿ ಹಜರತ್ ಮೊಹಮ್ಮದ್‌ರವರ ಸಮಾನತೆ, ಮಹಾತ್ಮ ಬುದ್ಧನ ಕರುಣೆ, ಮಹಾವೀರನ ಅಹಿಂಸೆ, ಶ್ರೀಕೃಷ್ಣನ ಕರ್ಮಸಿದ್ಧಾಂತ, ಶ್ರೀರಾಮನಲ್ಲಿದ್ದ ನಿಷ್ಠೆ, ಶ್ರೀರಾಮಕೃಷ್ಣರಲ್ಲಿದ್ದ

**ಮನುಷ್ಯನಿಗೆ ಶಾಂತಿ ನೆಮ್ಮದಿಯನ್ನು ತರುವುದೇ ಧರ್ಮದ ಮೂಲ ಉದ್ದೇಶ. ನಂತರ ಸುಖವಾಗಿರಬಹುದೆಂದು ಈ ಜೀವನದಲ್ಲಿ ಯಾತನೆಯನ್ನು ಅನುಭವಿಸುವುದು ಜಾಣತನವಲ್ಲ. ಯಾರೇ ಆಗಲಿ ಈಗ ಇಲ್ಲಿ ಸುಖಸಂತೋಷದಿಂದಿರಬೇಕು. ಯಾವ ಧರ್ಮ ಇವುಗಳನ್ನು ತರಬಲ್ಲದೋ ಅದೇ ಮಾನವಜನಾಂಗದ ನಿಜವಾದ ಧರ್ಮ.** – ಸ್ವಾಮಿ ವಿವೇಕಾನಂದ

ಸರ್ವಧರ್ಮ ಸಮನ್ವಯ, ಮಹಾತ್ಮ ಗಾಂಧೀಜಿಯವರಲ್ಲಿದ್ದ ಸೇವಾ ಮನೋಭಾವ, ವೀರಸಂನ್ಯಾಸಿ ವಿವೇಕಾನಂದರಲ್ಲಿದ್ದ ದೇಶಭಕ್ತಿ –ಇವೆಲ್ಲರ ಆದರ್ಶಗಳು ಜಗತ್ತಿನ ಉದ್ಧಾರಕ್ಕಾಗಿ, ಸಮಸ್ತ ಜನತೆಯ ಏಳಿಗೆಗಾಗಿ ಇರುವ ದಾರಿದೀಪಗಳಾಗಿವೆ.

### ಶಾಂತಿಮಂತ್ರ

ಬಂಧುಗಳೇ, ನಾವೆಲ್ಲರೂ ಮಹಾತ್ಮರು ತೋರಿಸಿಕೊಟ್ಟ ಶಾಂತಿಮಂತ್ರವನ್ನು ಪಠಿಸುತ್ತ, ಸೌಹಾರ್ದ ಬದುಕಿನತ್ತ ಪಯಣ ಬೆಳೆಸೋಣ. ನೆಮ್ಮದಿ ಕಾಣದ ಬದುಕಿಗೆ ನೆಮ್ಮದಿ ನೀಡುವ ಪ್ರಯತ್ನ ಮಾಡೋಣ, ಸೃಷ್ಟಿಕರ್ತನಲ್ಲಿ ನಮ್ಮ ಭಕ್ತಿಭಾವವನ್ನು ಸಮರ್ಪಿಸೋಣ, ಧರ್ಮಧರ್ಮಗಳಲ್ಲಿ ಸಮನ್ವಯತೆಯನ್ನು ನಿರ್ಮಿಸೋಣ. ಭಾಷೆ ಭಾಷೆಗಳ ನಡುವೆ ಔದಾರ್ಯವನ್ನು ಸಾಧಿಸೋಣ. ಪರಸ್ಪರ ಪ್ರೀತಿಯಿಂದ ಎಲ್ಲರಿಗೂ ಆಪ್ಯಾಯಮಾನವಾಗುವಂತಹ ಸದ್ಗುಣಗಳನ್ನು ಬೆಳೆಸೋಣ. ನೆರೆಹೊರೆ ರಾಜ್ಯಗಳಲ್ಲಿ ಮತ್ತು ರಾಷ್ಟ್ರಗಳಲ್ಲಿ ನಮ್ಮ ಸಂಸ್ಕೃತಿಯನ್ನು ಪರಿಚಯಿಸೋಣ, ಅವರಲ್ಲಿ ನಾವು ಸ್ನೇಹ–ವಿಶ್ವಾಸ ಗಳಿಸೋಣ.

ಒಟ್ಟಿನಲ್ಲಿ, **ಸಮಾನತೆ ಸೋದರತೆ ಸೌಹಾರ್ದತೆ ಭಾವೈಕ್ಯತೆಯ ಸಂಬಂಧಗಳ** ಮೂಲಕ ವಿಶ್ವಶಾಂತಿ ಸ್ಥಾಪಿಸುವಲ್ಲಿ ನಾವೆಲ್ಲರೂ ಒಂದಾಗಿ ಶ್ರಮಿಸೋಣ; ವಿಶ್ವಬಂಧುಗಳಾಗಿ ಸಾಗೋಣ, ಎಲ್ಲರಿಗೂ ಸುಖ ಶಾಂತಿ ನೀಡಲೆಂದು ಆ ಸರ್ವಶಕ್ತನಲ್ಲಿ ಪ್ರಾರ್ಥನೆ ಮಾಡೋಣ. ▪

## ಪ್ರಾಮಾಣಿಕತೆ ತಂದ ಪದವಿ

ಒಂದು ಕಂಪನಿಯಲ್ಲಿ ಮುಂದಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಾಗಿ ಅರ್ಹ ಅಭ್ಯರ್ಥಿಯ ಪರೀಕ್ಷೆ ನಡೆಯಿತು. ವಯಸ್ಸಾದ ಈಗಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಂಪನಿಯ ಎಲ್ಲ ಯುವ ಅಧಿಕಾರಿಗಳನ್ನು ಒಂದು ದಿನ ಕರೆದು, "ನನಗೀಗ ವಯಸ್ಸಾಗುತ್ತ ಬಂದಿದೆ. ನಾನು ನನ್ನ ಜಾಗದಲ್ಲಿ ನಿಮ್ಮಲ್ಲೇ ಒಬ್ಬರನ್ನು ನೇಮಿಸಲು ತೀರ್ಮಾನಿಸಿದ್ದೇನೆ. ಇವತ್ತು ನಾನು ನಿಮಗೆಲ್ಲ ಒಂದು ಬೀಜವನ್ನು ನೀಡಲಿದ್ದೇನೆ. ನೀವು ಆ ಬೀಜವನ್ನು ಬಿತ್ತಿ, ನೀರುಣಿಸಿ ಚೆನ್ನಾಗಿ ಆರೈಕೆ ಮಾಡಿ, ಗಿಡವನ್ನು ಬೆಳೆಸಿ ಒಂದು ವರ್ಷದ ಬಳಿಕ ತಂದು ತೋರಿಸಬೇಕು. ನೀವು ತಂದ ಗಿಡವನ್ನು ಪರೀಕ್ಷಿಸಿ ನಿಮ್ಮಲ್ಲಿ ಯಾರು ಆ ಪದವಿಗೆ ಯೋಗ್ಯರೆಂದು ತೀರ್ಮಾನಿಸುತ್ತೇನೆ."

ಆ ದಿನ ರಾಜೇಶನೂ ಆ ಸಭೆಯಲ್ಲಿದ್ದ. ಅವನಿಗೂ ಎಲ್ಲರಂತೆ ಒಂದು ಬೀಜ ಸಿಕ್ಕಿತು. ಮನೆಗೆ ಬಂದು ಉತ್ತೇಜಿತನಾಗಿ ತನ್ನ ಪತ್ನಿಯ ಮುಂದೆ ನಡೆದುದನ್ನು ತಿಳಿಸಿದ. ಅವಳೂ ಸಂತೋಷದಿಂದ ಒಂದು ಕುಂಡವನ್ನೂ, ಒಂದಿಷ್ಟು ಗೊಬ್ಬರವನ್ನೂ, ತಂದು ಬೀಜ ನೆಡುವುದರಲ್ಲಿ ಸಹಾಯ ಮಾಡಿದಳು. ಹೀಗೆ ಉತ್ಸಾಹದಿಂದ ಬೀಜದ ಆರೈಕೆ ಮಾಡುವುದರಲ್ಲೆ ಅವರ ದಿನಗಳು ಉರುಳಿದವು. ಒಂದಲ್ಲ, ಎರಡಲ್ಲ, ಮೂರು ವಾರ ಕಳೆದರೂ ರಾಜೇಶನು ನೆಟ್ಟ ಬೀಜವು ಮೊಳೆತೇ ಇರಲಿಲ್ಲ! ಆದರೆ ಅವನ ಸ್ನೇಹಿತರು ಆಗಲೇ ತಮ್ಮ ಗಿಡದ ಬಗ್ಗೆ ಮಾತನಾಡಲು ತೊಡಗಿದ್ದಾರೆ! ಆರು ತಿಂಗಳು ಸತತವಾಗಿ ಆರೈಕೆ ಮಾಡಿಯೂ ಅವನು ನೆಟ್ಟ ಬೀಜದಲ್ಲಿ ಯಾವ ಬದಲಾವಣೆಯೂ ಕಾಣಲಿಲ್ಲ! ಕೊನೆಗೆ ಒಂದು ವರ್ಷದ ನಿಗದಿತ ಅವಧಿ ಮುಗಿಯಿತು. ಆತನ ಎಲ್ಲ ಸಹೋದ್ಯೋಗಿಗಳು ಹೆಮ್ಮೆಯಿಂದ ತಮ್ಮ ತಮ್ಮ ಗಿಡಗಳೊಂದಿಗೆ ಕಂಪನಿಗೆ ಹಿಂತಿರುಗಿದ್ದರು. ರಾಜೇಶ ತಾನು ಖಾಲಿ ಕುಂಡವನ್ನಷ್ಟೆ ತೆಗೆದುಕೊಂಡು ಕಂಪೆನಿಗೆ ಹೋಗುವುದಿಲ್ಲವೆಂದು ತನ್ನ ಪತ್ನಿಗೆ ತಿಳಿಸಿದ. ಆದರೆ ಆಕೆ ಅವನಿಗೆ ಪ್ರಾಮಾಣಿಕತೆಯ ಪಾಠವನ್ನು ಹೇಳಿ ಸಮಾಧಾನಪಡಿಸಿದಳು. ರಾಜೇಶ ತನ್ನ ಖಾಲಿ ಕುಂಡವನ್ನು ತೆಗೆದುಕೊಂಡು ಹೋಗಿ ತೋರಿಸಿದ. ಎಲ್ಲರೂ ಇದನ್ನು ನೋಡಿ ಘೊಳ್ಳೆಂದು ನಕ್ಕರು. ತಮ್ಮ ವಿವಿಧ ಜಾತಿಯ ಗಿಡಗಳೆಡೆಗೆ ಹೆಮ್ಮೆಯ ದೃಷ್ಟಿ ಬೀರಿದರು.

"ಆಹ್! ಅದ್ಭುತ! ಎಷ್ಟು ವಿಧದ ಸುಂದರ ಪುಷ್ಪಗಳಿಂದ ಕೂಡಿರುವ ಗಿಡಗಳನ್ನು ಬೆಳೆಸಿದ್ದೀರಿ," ಉದ್ಗರಿಸಿದರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. ಇದ್ದಕ್ಕಿದ್ದಂತೆ ಅವರ ದೃಷ್ಟಿ ರಾಜೇಶನ ಕುಂಡದ ಕಡೆಗೆ ಬಿತ್ತು. ಕಂಪೆನಿಯ ಹಣಕಾಸು ನಿರ್ದೇಶಕರಿಗೆ, ರಾಜೇಶನನ್ನು ತಮ್ಮ ಬಳಿ ಕರೆತರುವಂತೆ ಅವರು ಹೇಳಿದರು. ರಾಜೇಶನಿಗೆ ಸಂಕಟ ಶುರುವಾಯಿತು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅವನ ಕತೆಯನ್ನು ಕೇಳಿದರು. ರಾಜೇಶನೊಬ್ಬನನ್ನು ಬಿಟ್ಟು ಅಲ್ಲಿ ನಿಂತಿದ್ದ ಪ್ರತಿಯೊಬ್ಬರಿಗೂ ಕುಳಿತುಕೊಳ್ಳುವಂತೆ ಸಂಜ್ಞೆ ಮಾಡಿದರು. ಈಗ ಎತ್ತರದ ದನಿಯಲ್ಲಿ ಘೋಷಿಸಿದರು, "ಇಲ್ಲಿ ನೋಡಿ, ನಿಮ್ಮ ಮುಂದಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. ಇವನ ಹೆಸರು ರಾಜೇಶ್ ಅಂತ." ರಾಜೇಶನಿಗಾದ ಆಶ್ಚರ್ಯಕ್ಕೆ ಪಾರವೇ ಇಲ್ಲ! ಆಗ ಮಾತು ಮುಂದುವರೆಸುತ್ತ ಅವರು ನುಡಿದರು, "ಒಂದು ವರ್ಷದ ಕೆಳಗೆ ನಾನು ನಿಮಗೆಲ್ಲ ಒಂದೊಂದು ಬೀಜವನ್ನು ನೀಡಿದ್ದೆ. ಆದರೆ, ಕ್ಷಮಿಸಿ, ನಿಮಗೆ ನಾನು ಕೊಟ್ಟದ್ದು ತಮ್ಮ ಸತ್ವವನ್ನು ಕಳೆದುಕೊಂಡ ಹುರಿದ ಬೀಜಗಳು. ಆದರೆ ಬಹಳ 'ಬುದ್ಧಿವಂತ' ರಾದ ನೀವು ಹುರಿದ ಬೀಜಗಳಿಂದಲೇ ಗಿಡಗಳನ್ನು ಬೆಳೆಸಿದ್ದೀರಿ! ಆದರೆ ರಾಜೇಶ್ ಹಾಗೆ ಮಾಡಲು ಹೋಗಲಿಲ್ಲ. ಅವನಿಗೆ ಮಾತ್ರ ನಾನು ಕೊಟ್ಟ ಬೀಜವನ್ನು ಹಾಗೆಯೆ ಹಿಂತಿರುಗಿಸುವ ಧೈರ್ಯ ಹಾಗೂ ಪ್ರಾಮಾಣಿಕತೆಯಿತ್ತು. ಹೀಗಾಗಿ ಅವನೇ ಮುಂದಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕಗೊಳ್ಳಲು ಅರ್ಹ." "ಯಾರಲ್ಲಿ ಕುಟಿಲತೆಯಾಗಲಿ ಅನೃತವಾಗಲಿ ಭ್ರಮೆಯಾಗಲಿ ಇಲ್ಲವೊ ಅಂತಹವರಿಗೆ ಮಾತ್ರ ಈ ರಜಸ್ಸಿಲ್ಲದ ಬ್ರಹ್ಮಲೋಕ" ಎಂದು ಪ್ರಶ್ನೋಪನಿಷತ್ತು (೧.೧೬) ಹೇಳುತ್ತದೆ. ಪ್ರಾಮಾಣಿಕತೆಯಿಂದ ಮಹತ್ತಾದ ಬ್ರಹ್ಮಲೋಕವೇ ಪ್ರಾಪ್ತವಾಗುವಾಗ ಇನ್ನು ಸಾಮಾನ್ಯ ಲೌಕಿಕ ಪದವಿ ಪುರಸ್ಕಾರಗಳು ದಕ್ಕವೇನು? (ಇಂಟರ್‌ನೆಟ್‌ನಿಂದ)